2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆ:51/2023

ಪಿ.ಡಬ್ಲು: 16 ಸಿಡಬ್ಲು:44

ಸಾಕ್ಷಿಯ ಹೆಸರು : ರಾಘವೇಂದ್ರ . ಬಿ . ಜಿ

ತಂದೆ ಹೆಸರು : ಗಂಗಾಧರ್ . ಬಿ . ವಿ

ವಯಸ್ಸು : 34 ವರ್ಷ

ವೃತ್ತಿ : ಸೀನಿಯರ್ ಸೈಂಟಿಫಿಕ್ ಆಫೀಸರ್ ಆರ್ ಎಫ್ ಎಸ್ ಎಲ್ ಬಳ್ಳಾರಿ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: 24-08-2024

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

ನಾನು ದಿ: 02-02-2022 ರಿಂದ ಇಲ್ಲಿಯವರೆಗೆ ಬಳ್ಳಾರಿಯ ಪ್ರಾದೇಶಿಕ ವಿದಿ ವಿಜ್ಞಾನ ಪ್ರಯೋಗಾಲಯದಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 05-04-2023 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ 15 ಸೀಲಾದ ವಸ್ತು ಗಳನ್ನು ನಮ್ಮ ಪ್ರಯೋಗಾಲಯಕ್ಕೆ ಚಾಸಾ-35 ರವರ ಮುಖಾಂತರ ನಮ್ಮ ಪ್ರಯೋಗಾಲಯಕ್ಕೆ ಕಳುಹಿಸಿದ್ದು ಅವುಗಳನ್ನು ನಾನು ವೈಜ್ಞಾನಿಕ ವಿಶ್ಲೇಷಣೆಗೊಸ್ಕರ ತೆರೆದು ನೋಡಲಾಗಿ ಸದರಿ ವಸ್ತು ಗಳ ಮೇಲೆ ಇದ್ದ ಮಾದರಿ ಸೀಲ್ ಒಂದಕ್ಕೊಂದು ಹೊಲಿಕೆಯಾಗಿದ್ದು ವೈಜ್ಞಾನಿಕ ವಿಶ್ಲೇಷಣೆಗೊಸ್ಕರ ತೆರೆದು ನೋಡಲಾಗಿ 1 ನೇ ವಸ್ತು ಒಂದು ಬೆಡ್ ಶೀಟ್, 2 ನೇ ವಸ್ತು ಒಂದು ಟವೇಲ್, 3 ನೇ ವಸ್ತು ಒಣಗಿದ ರಕ್ತ, 4 ನೇ ವಸ್ತು ರಕ್ತ ಸಂಗ್ರಹಣೆ ಮಾಡಿದ ಬ್ಯಾಂಡೇಜ್, 5 ನೇ ವಸ್ಸು ಒಂದು ಚೈನ್, 6 ನೇ ವಸ್ತು ಒಂದು ಕೌದಿ, 7 ನೇ ವಸ್ತು ತಲೆ ದಿಂಬಿನ ಬಾಗ, 8 ನೇ ವಸ್ತು ಒಂದು ಜೊತೆ ಚಪ್ಪಲಿ, 9 ನೇ ವಸ್ತು ಒಂದು ನೈಟಿ, 10 ನೇ ಒಂದು ಅಂಗಿ, 11 ನೇ ವಸ್ತು ಒಂದು ಕಬ್ಬಿಣದ ಹಾರೇ, 12 ನೇ ವಸ್ತು ಒಂದು ಮ್ಯಾಟ್, 13 ನೇ ವಸ್ತು ಒಂದು ಬನಿಯಾನ್, 14 ನೇ ವಸ್ತು ಒಂದು ಲುಂಗಿ ಮತ್ತು 15 ನೇ ವಸ್ತು ರಕ್ತ

ಶೇಕರಣೆ ಮಾಡಿದ ಬ್ಯಾಂಡೇಜ್ ಆಗಿದ್ದವು. ಸದರಿ ವಸ್ತುಗಳಿಗೆ ತನಿಖಾಧಿಕಾರಿಗಳು ತನಿಖೆಯ ಗುರುತು **1** ರಿಂದ **15** ಎಂದು ಕ್ರಮವಾಗಿ ನೀಡಿದ್ದರು.

ನಾನು ಸದರಿ ವಸ್ತುಗಳನ್ನು ವೈಜ್ಞಾನಿಕ ವಿಶ್ಲೇಷಣೆಗೊಳಪಡಿಸಿದಾಗ ಈ ಕೆಳಗಿನಂತೆ ಅಭಿಪ್ರಾಯ ವರದಿಯನ್ನು ನೀಡಿರುತ್ತೇನೆ.

ವಸ್ತು ಸಂಖ್ಯೆ: **1** ರಿಂದ **15** ವರೆಗಿನ ವಸ್ತುಗಳ ಮೇಲೆ ರಕ್ತದ ಕಲೆ ಕಂಡು ಬಂದಿದ್ದು ಅದು ಮನುಷ್ಯನ ಒ ಗುಂಪಿನ ರಕ್ತವಾಗಿರುತ್ತದೆ ಎಂದು ದಿಃ **23-05-2023** ರಂದು ವರದಿಯನ್ನು ತಯಾರಿಸಿ ಮಾನ್ಯ ಉಪ ನಿರ್ದೇಶಕರು, ಆರ್ ಎಫ್ ಎಸ್ ಎಲ್ ಬಳ್ಳಾರಿ ರವರ ಮೂಲಕ ವರದಿಯೊಂದಿಗೆ ತನಿಖಾಧಿಕಾರಿಯವರಿಗ ಪರೀಕ್ಷೆಯ ನಂತರ ಎಲ್ಲಾ ವಸ್ತು ಗಳನ್ನು ನಮ್ಮ ಪ್ರಾಯೋಗಾಲಯದ ಮಾದರಿ ಸೀಲ್‌ನೊಂದಿಗೆ ಹಿಂದಿರುಗಿರಿಸಿರುತ್ತೇನೆ. ಸಾಕ್ಷಿಯೂ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**48** ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ಡಿಜಿಟಲ್ ಸಹಿ ಇದೆ. ಪರೀಕ್ಷೆಯ ನಂತರ ಎಲ್ಲಾ ವಸ್ತು ಗಳನ್ನು ಸ್ಯಾಂಪಲ್ ಸೀಲ್ ನೊಂದಿಗೆ ಪೊಲೀಸ್ ಅಧಿಕಾರಿಯರವರಿಗೆ ಕಳುಹಿಸಿಕೊಟ್ಟಿರುತ್ತೇವೆ. ಸದರಿ ಸ್ಯಾಂಪಲ್ ಸೀಲ್‌ನ್ನು ನಿಪಿ-**49** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**49**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮು.ಮಾ-**1** ರಿಂದ **8** ಮತ್ತು **10** ರಿಂದ **16** ನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳ ಮೇಲೆ ಇರುವ ಸಾಕ್ಷಿಯ ಕಿರು ಸಹಿ ಮತ್ತು ಸೀಲ್ ಅನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ. ಸಮಯ ಕೊಡಲು ನಿರಾಕರಿಸಲಾಯಿತು. ಆರೋಪಿ ಪರ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.